ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಹುಣಸೂರು.

**ಓ.ಎಸ್ಃ 102/2018**

ದಿನಾಂಕಃ 16.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ.ಎಸ್.ವೈ ರವರಿಂದಃ

ನಾನು ವ್ಯವಸಾಯ ಮತ್ತು ಕೂಲಿ ಕೆಲಸವನ್ನು ಮಾಡುತ್ತೇನೆ. ನನಗೆ 4 ಎಕರೆ 2 ಗುಂಟೆ ಜಮೀನು ಇದೆ. ಸದರಿ ಜಮೀನು ನನ್ನ ಹೆಸರಿನಲ್ಲಿ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ಗೊತ್ತು. ನಾನು ಸಾಕ್ಷಿಯನ್ನು ಎಲ್ಲ ವಾದಿಯರ ಪರವಾಗಿ ಹೇಳುತ್ತಿದ್ದೇನೆ. ಎಲ್ಲ ವಾದಿಗಳು ಅವರ ಪರವಾಗಿ ಸಾಕ್ಷಿ ಹೇಳಲು ನನಗೆ ಅನುಮತಿಯನ್ನು ಕೊಟ್ಟಿರುತ್ತಾರೆ. ಆದರೆ, ಯಾವುದೇ ಅಧಿಕಾರ ಪತ್ರ ವನ್ನು ಕೊಟ್ಟಿರುವುದಿಲ್ಲ. ನನ್ನನ್ನು ಬಿಟ್ಟು ದಾವೆಯಿಲ್ಲರುವ ಉಳಿದ ವಾದಿಗಳು ವಾದಪತ್ರ ಕ್ಕೆ ಮತ್ತು ವಕಾಲತ್ ಗೆ ಸಹಿಯನ್ನು ಮಾಡಿಲ್ಲ ಎನ್ನುವುದು ಮತ್ತು ದಾವೆಯನ್ನು ಹೂಡಲು ಯಾವುದೇ ಅನುಮತಿ ಕೊಡದೇ ಇದ್ದರೂ ನಾನೇ ಅವರ ಸಹಿಗಳನ್ನು ನಕಲು ಮಾಡಿ ದಾವೆ ಹೂಡಿದ್ದೇನೆ ಎನ್ನುವುದು ಸರಿಯಲ್ಲ. ಅದೇ ರೀತಿ ಸುಳ್ಳು ಪ್ರಮಾಣ ಪತ್ರ ವನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ

ಈಗ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ದಾವೆಯಲ್ಲಿ ಹಾಜರುಪಡಿಸುವ ಬೇರೆ ದಾಖಲೆಗಳು ಯಾವುದು ಇರುವುದಿಲ್ಲ. ದಾವಾ ಆಸ್ತಿಗಳು ನಾರಾಯಣ ಸ್ವಾಮಿ ಮತ್ತು ಇತರರ ಹೆಸರಿನಲ್ಲಿ ಹೇಗೆ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ನಾರಾಯಣ ಸ್ವಾಮಿಯನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ದಾಖಲೆಗಳಲ್ಲಿ ನಿವೇಶನ ಎಂದು ಬರೆದಿದ್ದರೇ ಅದು ಭೂಪರಿವರ್ತನೆ ಆದ ಜಮೀನು ಎಂದು ಅರ್ಥ ಎನ್ನುವುದು ನಿಜ. ನಾನು ಈ ದಾವೆಯಲ್ಲಿ ಭೂ ಪರಿವರ್ತನೆ ಆದ ಆದೇಶವನ್ನು ನ್ಯಾಯಾಲಯ ಕ್ಕೆ ಹಾಜರುಪಡಿಸಿರುತ್ತೇನೆ. ದಾವೆಯಲ್ಲಿ ದಾವಾ ಆಸ್ತಿ ಜಮೀನು ಎಂದು ಬರೆಸಿರುತ್ತದೆ. ಆದರೆ, ನಿವೇಶನ ಎಂದು ಬರೆಸಿರುವುದಿಲ್ಲ. ದಾವೆಯನ್ನು ಹೂಡುವ ಸಮಯದಲ್ಲಿ ದಾವಾ ಆಸ್ತಿಯು ವ್ಯವಸಾಯ / ಉಳುಮೆ ಮಾಡುವ ಜಮೀನು ಆಗಿರದೇ ವಾಸಯೋಗ್ಯ ನಿವೇಶನಗಳಾಗಿ ಪರಿವರ್ತನೆ ಆಗಿತ್ತು ಎನ್ನುವುದಕ್ಕೆ ಸಾಕ್ಷಿಯು

ಸುಳ್ಳು ಎಂದು ಹೇಳುತ್ತಾ, ಭೂ ಪರಿವರ್ತನೆ ಆದ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಭೂಪರಿವರ್ತನೆ ಆದ ಆದೇಶದ ಕುರಿತು ದಾವೆ ಹೂಡುವ ಸಮಯದಲ್ಲಿ ನಮ್ಮ ವಕೀಲರಿಗೆ ತಿಳಿಸಿದ್ದೆ. ಸದರಿ ಭೂ ಪರಿವರ್ತನೆ ದಿಃ 09.03.2017 ರಂದು ಆಗಿದೆ ಎಂದು ಪಹಣಿಗಳಲ್ಲಿ ಬರೆದಿರುತ್ತಾರೆ. ಸದರಿ ಸಂಗತಿ ನನಗೆ 2018 ರಲ್ಲಿ ಗೊತ್ತಾಯಿತು. ನಿ.ಪಿ. 28 ರಿಂದ 32 ಪಹಣಿಗಳಲ್ಲಿ ಎಂ.ಪಿ.ಜಾರ್ಜ್, ಮರಿಯಂ ಚಾಂಡಿ, ಅಲೆಗ್ಸಾಂಡರ್ ಮತ್ತು ಇತರರ ಹೆಸರು ಜಂಟಿ ಖಾತೆ ದಾಖಲಾಗಿದೆ ಎನ್ನುವುದು ನಿಜ. ಸದರಿ ಮುಟೇಷನ್ ಪ್ರತಿ ಕಂದಾಯ ಇಲಾಖೆಯಲ್ಲಿ ಲಭ್ಯ ಇರದೇ ಇದ್ದುದರಿಂದ ನಾನು ನೋಡಿರುವುದಿಲ್ಲ. ಸದರಿ ಅಲಭ್ಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಅಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. ಸದರಿ ಮುಟೇಷನ್ ಬದಲಾವಣೆಯನ್ನು ಪ್ರಶ್ನೆಮಾಡಿ ನಾನು ಕಂದಾಯ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ಎಂ.ಪಿ. ಜಾರ್ಜ್ ಮತ್ತು ಇತರರು ಜಮೀನು ಖರೀದಿಸಿದ್ದ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಗಳನ್ನು ನಾರಾಯಣ ಸ್ವಾಮಿ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು ದಿಃ 24.03.1980 ರಲ್ಲಿ 1 ನೇ ಪ್ರತಿವಾದಿ, 2 ರಿಂದ 6 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ಸುಳ್ಳು. ಸದರಿ ಸಂಗತಿ ನನಗೆ ಗೊತ್ತಿದ್ದರೂ ಸಹ ದಾವೆಗೆ ತೊಂದರೆ ಆಗುತ್ತದೆ ಎಂದು ತಿಳಿದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಪ್ರತಿವಾದಿ 2 ರಿಂದ 6 ಇಂದಿಗೂ ದಾವಾ ಆಸ್ತಿಗಳ ಸ್ವಾಧೀನಾನುಭವದಲ್ಲಿದ್ದಾರೆ ಎನ್ನುವುದು ಸುಳ್ಳು. ಆದರೆ, ನಾವೇ ಸ್ವಾಧೀನಾನುಭವದಲ್ಲಿದ್ದೇವೆ. ಪ್ರತಿವಾದಿ 2 ರಿಂದ 6 ಸದರಿ ಜಮೀನನ್ನು ದಿಃ 17.05.2013 ರಂದು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ 7 ನೇ ಪ್ರತಿವಾದಿ ಜಮೀನನ್ನು ದಿಃ 09.03.2017 ರಂದು ಭೂ ಪರಿವರ್ತನೆ ಮಾಡಿ, ನಿವೇಶನಗಳನ್ನು ಮಾಡಿದ್ದಾರೆ ಎನ್ನುವುದು ನಿಜ. 1980 ರಲ್ಲಿಯೇ ದಾವಾ ಆಸ್ತಿ ಜಮೀನಿಗೆ ಸಂಬಂಧಪಟ್ಟು ಕ್ರಯಪತ್ರಗಳು ಆಗಿರುವುದರಿಂದ ಈ ದಾವೆಗಳು ಕಾಲಮಿತಿ ಅಡಿಯಲ್ಲಿ ಊರ್ಜಿತವಾಗುವುದಿಲ್ಲ ಎನ್ನುವುದು ಸರಿಯಲ್ಲ.

ದಾವಾ ಆಸ್ತಿ ಜಮೀನುಗಳು ದೊಡ್ಡಕಾಡನಹಳ್ಳಿ ಗ್ರಾಮದ ಸರ್ವೆ ನಂ. ಭೂಮಿಗಳು

ಎನ್ನುವುದು ನಿಜ. ಸದರಿ ಜಮೀನು ನಮ್ಮ ಊರಾದ ಚಿಕ್ಕ ಕಾಡನ ಹಳ್ಳಿಯಿಂದ ಮುಕ್ಕಾಲು ಕಿ.ಮೀ ದೂರದಲ್ಲಿದೆ. ನಮ್ಮ ಊರಿನ ಹತ್ತಿರ ಆರ್.ಎಂ.ಪಿ. ಕಾರ್ಖಾನೆ ಇದೆ ಎನ್ನುವುದು ನಿಜ. ಸದರಿ ಕಾರ್ಖಾನೆಗೆ ಚಿಕ್ಕಕಾಡನ ಹಳ್ಳಿ ಗ್ರಾಮದ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಆದರೆ, ದೊಡ್ಡ ಕಾಡನ ಹಳ್ಳಿ ಗ್ರಾಮದ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡಿಲ್ಲ. ನಮ್ಮ ಜಮೀನುಗಳನ್ನು ಸಹ ಸ್ವಾಧೀನ ಪಡಿಸಿಕೊಂಡು, ಪರಿಹಾರ ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ನಮ್ಮ ತಾಯಿಯ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು, ಅದರ ಪರಿಹಾರವನ್ನು ಪಡೆದುಕೊಂಡಿರುತ್ತೇವೆ.

ಚಿಕ್ಕ ಕಾಡನ ಹಳ್ಳಿ ಗ್ರಾಮದಲ್ಲಿ ನಮಗೆ ಮನೆ ಮತ್ತು ನಿವೇಶನಗಳು ಇವೆ. ಉಳಿದ ವಾದಿಗಳಿಗೂ ಸಹ ನಮ್ಮ ಊರಿನಲ್ಲಿ ಮನೆಗಳು ಇವೆ. ಆದರೆ, ಭೂಮಿಗಳು ಇಲ್ಲ. ಅವರು ಯಾರು ಭೂ ಸ್ವಾಧೀನತೆಯ ಪರಿಹಾರವನ್ನು ಪಡೆದಿರುವುದಿಲ್ಲ. ಈ ದಾವೆಯಲ್ಲಿ ನನ್ನ ಕುಟುಂಬದ ಉಳಿದ ಮನೆ ಮತ್ತು ನಿವೇಶನಗಳನ್ನು ಸೇರಿಸದೇ ಇರುವುದರಿಂದ ದಾವೆಯು ಊರ್ಜಿತವಾಗುವುದಿಲ್ಲ ಎನ್ನುವುದು ಸರಿಯಲ್ಲ. ನಾವು ಎಲ್ಲ ವಾದಿಗಳು ಒಟ್ಟು ಕುಟುಂಬದ ಸದಸ್ಯರು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಎಲ್ಲರ ಪಡಿತರ ಚೀಟಿಗಳು ಬೇರೆ ಬೇರೆ ಇರುತ್ತದೆ. ಆದರೆ, ಒಟ್ಟಿಗೆ ಇರುವುದಿಲ್ಲ. ಸುಮಾರು 5-6 ವರ್ಷಗಳಿಂದ ಪಡಿತರ ಚೀಟಿಗಳು ಬೇರೆ ಬೇರೆ ಆಗಿರುತ್ತವೆ. ನಾವು ಒಟ್ಟು ಕುಟುಂಬದ ಸದಸ್ಯರು ಅಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಯರಿಂದ ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಈ ಸಮಯದಲ್ಲಿ ಶ್ರೀ ಬಿ.ಎಸ್.ವೈ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.